

ಅಂದರೆ ಪ್ರೀತಿ, ಭಯ, ನಯ ವಿನಯದಂತಹ ಮೃದು ಭಾವನೆ ಮತ್ತು ಅವುಗಳಿಂದ ಬರುವ ವರ್ತನೆಗಳು ಹೆಣ್ಣಿನ ಸ್ವತ್ತು ಎನ್ನಿಸಿಕೊಂಡರೆ ಧೈರ್ಯ ಕೋಪ ಒರಟುತನ ನೋವನ್ನು ಸಹಿಸಿಕೊಳ್ಳುವುದು ಮುಂತಾದವುಗಳಿಗೆ ಗಂಡಸು ಹಕ್ಕುದಾರನಾಗುತ್ತಾನೆ. ಇವುಗಳಿಗೆ ಸಾಕಷ್ಟು ಅಪವಾದಗಳಿವೆ ಎನ್ನುವುದು ನಿಜ. ಆದರೆ ಸದ್ಯಕ್ಕೆ ನಮ್ಮೆಲ್ಲರ ಒಟ್ಟಾರೆ ಮನೋಭಾವ ಮತ್ತು ವರ್ತನೆಗಳನ್ನು ಚರ್ಚಿಸುತ್ತಿದ್ದೇವೆ ಎಂದು ಮರೆಯದಿರೋಣ.

ಇಂತಹ ಲಿಂಗಾಧಾರಿತ ಚಿಂತನೆಗಳೆಲ್ಲಾ ನಮಗೆ ರಕ್ತಗತವಾಗಿಬಿಟ್ಟಿದೆ. ಏಕೆಂದರೆ ವಯಸ್ಕರಷ್ಟೇ ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಿಲ್ಲ. ಮಕ್ಕಳು ಸಹ ಇಂತಹುದೇ ಮಾತುಗಳನ್ನು ಆಡುತ್ತಾರೆ. 'ಏ ಅದ್ಯಾಕೆ ಹುಡುಗೀರ ತರ ಅಡ್ತೀಯಾ', 'ಹುಡುಗರ ಹಾಗೆ ಎಗರಾಡ್ಬೇಡ' ಎನ್ನುವಂತಹ ಮಾತುಗಳು ಮಕ್ಕಳ ಬಾಯಿಯಲ್ಲಿಯೂ ಹರಿದಾಡುತ್ತಿರುತ್ತವೆ. ನಮ್ಮ ಸಿನಿಮಾಗಳಲ್ಲಿ ಇಂತಹ ಸಂಭಾಷಣೆಗಳು ಬಹಳ ಸಹಜ ಎನ್ನುವಂತೆ ಮೂಡಿಬರುತ್ತವೆ.

ಇಂತಹ ಲಿಂಗಭೇದದ (ಸೆಕ್ಸಿಸ್ಟ್) ಚಿಂತನೆಗಳಿಗೆ ಇನ್ನೂ ಆಳವಾದ ಮುಖಗಳಿವೆ. ಹೆಣ್ಣಿನ ಮೃದುತ್ವ, ನವಿರು, ನಾಜೂಕು ಮತ್ತು ಗಂಡಸಿನ ಧಾರ್ಷ್ಟ್ಯ, ಒರಟುತನಗಳನ್ನೆಲ್ಲಾ ಸಾಕಷ್ಟು ಸಾಹಿತಿಗಳೇ ಹಾಡಿ ಹೊಗಳುತ್ತಾರೆ. ತನ್ನ ದುಃಖ ದುಮ್ಮಾನಗಳನ್ನು ಅದುಮಿಟ್ಟು ಬೇಸರವನ್ನು ಮೀರಿ ಗಟ್ಟಿತನದ ಮುಖವಾಡವನ್ನು ಹೊತ್ತು ಬದುಕಿದವ ಗಂಡಸು ಎನ್ನಿಸಿಕೊಳ್ಳುತ್ತಾನೆ. ಎಲ್ಲಾ ದಬ್ಬಾಳಿಕೆಗಳನ್ನೂ ಸಹಿಸಿಕೊಂಡು ಎಲ್ಲರೆದುರು ತಗ್ಗಿಬಗ್ಗಿ ನಡೆದು ಎಲ್ಲರಿಗೂ ಪ್ರೀತಿ ಮಮತೆಗಳನ್ನು ಧಾರಾಳವಾಗಿ ಹಂಚುತ್ತಾ ಬದುಕಿದವಳು ಮಾದರಿ ಸ್ತ್ರೀಯಾಗುತ್ತಾಳೆ. ಆದರೆ ಹಾಗೆ ಬದುಕುವುದು ಯಾವುದೇ ಗಂಡಸಿಗೆ ಅಥವಾ ಹೆಂಗಸಿಗೆ ಎಂತಹ ನರಕಸದೃಶವಾದದ್ದು ಎಂದು ನಮಗೆ ತಿಳಿದಿದೆಯೇ?

**ಎಲ್ಲಾ ದಬ್ಬಾಳಿಕೆಗಳನ್ನೂ ಸಹಿಸಿಕೊಂಡು ಎಲ್ಲರೆದುರು ತಗ್ಗಿಬಗ್ಗಿ ನಡೆದು ಎಲ್ಲರಿಗೂ ಪ್ರೀತಿ ಮಮತೆಗಳನ್ನು ಧಾರಾಳವಾಗಿ ಹಂಚುತ್ತಾ ಬದುಕಿದವಳು ಮಾದರಿ ಸ್ತ್ರೀಯಾಗುತ್ತಾಳೆ.**

ದೈಹಿಕವಾಗಿ ಗಂಡು– ಹೆಣ್ಣುಗಳಲ್ಲಿ ವ್ಯತ್ಯಾಸವಿದೆ. ಇದೇ ಕಾರಣಕ್ಕಾಗಿ ಕೆಲವು ವೃತ್ತಿಗಳನ್ನು ಒಂದೇ ಲಿಂಗದವರು ಹೆಚ್ಚಾಗಿ ಆಯ್ದುಕೊಳ್ಳುವ ಸಾಧ್ಯತೆಗಳಿವೆ. ಆದರೆ ಗಂಡು ಮತ್ತು ಹೆಣ್ಣುಗಳ ಮೂಲಭೂತ ಸ್ವಭಾವ ವರ್ತನೆಗಳು ಬೇರೆ ಬೇರೆ ರೀತಿಯಲ್ಲಿರಬೇಕು ಎಂದು ನಾವು ನಿರೀಕ್ಷಿಸುವುದಾದರೆ ಅವರ ಯೋಚನೆ ಭಾವನೆಗಳು ಭಿನ್ನ ಭಿನ್ನವಾಗಿರಬೇಕು ಎಂದು ನಾವು ಹೇಳುತ್ತಿರುವುದಿಲ್ಲವೇ? ಅಂದರೆ ಭಾವನೆಗಳಿಗೂ ಪುಲ್ಲಿಂಗ–ಸ್ತ್ರೀಲಿಂಗವಿದೆ ಎಂದಾಯಿತು!

## ನಕಲಿ ಭಾವನೆಗಳು

ವಂಶಾಭಿವೃದ್ಧಿಯ ಅಗತ್ಯಕ್ಕಾಗಿ ಅದಕ್ಕೆ ಸಂಬಂಧಿಸಿದ ಅಂಗಗಳನ್ನು ಸ್ತ್ರೀ ಮತ್ತು ಪುರುಷರಲ್ಲಿ ಪ್ರಕೃತಿ ಬೇರೆಬೇರೆಯಾಗಿ ರೂಪಿಸಿದೆ. ಆದರೆ ಭಾವನೆಗಳಿಗೆ ಸಂಬಂಧಿಸಿದ ಭಿನ್ನತೆಯನ್ನು ನಾವೇ ಸೃಷ್ಟಿಸಿಕೊಂಡಿರಬಹುದು. ಶಿಲಾಯುಗದಲ್ಲಿ ಗಂಡು ಹೊರಗೆ ಬೇಟೆಯಾಡಿ ಕುಟುಂಬಕ್ಕೆ ಆಹಾರ ರಕ್ಷಣೆ ಒದಗಿಸುವುದು ಮತ್ತು ಹೆಣ್ಣು ಸಂತಾನವನ್ನು ನೋಡಿಕೊಳ್ಳುವುದು ಮಾನವಕುಲವನ್ನು ಮುಂದುವರೆಸುವ ದೃಷ್ಟಿಯಿಂದ ಅಗತ್ಯವಿದ್ದ ಕೆಲಸಗಳ ಹಂಚಿಕೆಯಾಗಿತ್ತು. ಹಾಗಾಗಿ ಕಾಡುಪ್ರಾಣಿಗಳ ಜೊತೆ ಸೆಣಸಾಡಬೇಕಿದ್ದ ಗಂಡು ಸ್ವಲ್ಪ ಮಾನಸಿಕ ಗಟ್ಟಿತನ, ದೃಢತೆಗಳನ್ನು ಮತ್ತು ಮಕ್ಕಳನ್ನು ಪೋಷಿಸಲು ಹೆಣ್ಣು ಮಮತೆ, ಮೃದುತ್ವಗಳನ್ನು ಬೆಳೆಸಿಕೊಳ್ಳುವುದು ಅನಿವಾರ್ಯವಾಗಿತ್ತು. ಆದರೆ ಇವತ್ತು ಗಂಡು ಹೆಣ್ಣಿನ ನಡುವೆ ಶಿಲಾಯುಗದ ರೀತಿಯಲ್ಲಿ ಕೆಲಸಗಳ ಹಂಚಿಕೆಯಾಗುವುದಿಲ್ಲವಲ್ಲ. ಹಾಗಿದ್ದರೂ ನಾವೇಕೆ ಅದೇ ಮನೋಭಾವನೆಯನ್ನು ಮುಂದುವರೆಸುತ್ತಿದ್ದೇವೆ? ಅಜ್ಜ ನೆಟ್ಟ ಆಲದ ಮರದ ನೆರಳಿನಿಂದ ಹೊರಬರಬೇಕಲ್ಲವೇ?

ಭಾವನೆಗಳನ್ನು ಲಿಂಗದ ಆಧಾರದ ಮೇಲೆ ಬೆಳೆಸಿಕೊಳ್ಳಲು ನಾವೆಲ್ಲಾ ಮಕ್ಕಳನ್ನು ತರಬೇತಿಗೊಳಿಸಿಕೊಳ್ಳುತ್ತಾ ಬಂದಿರುವುದರಿಂದ ಅವರು ಸಂದರ್ಭಕ್ಕೆ ಸಹಜವಾದ ಭಾವನೆಗಳನ್ನು ಮುಚ್ಚಿಹಾಕಿ ನಕಲಿ ಭಾವನೆಗಳನ್ನು ವ್ಯಕ್ತಪಡಿಸಲು ಕಲಿಯುತ್ತಾರೆ. ಟ್ರಾನ್ಸಾಕ್ಷನಲ್ ಅನಾಲಿಸಿಸ್ ಎನ್ನುವ ಮನೋಚಿಕಿತ್ಸಾ ವಿಧಾನವನ್ನು ಹುಟ್ಟುಹಾಕಿದ ಎರಿಕ್ ಬರ್ನ್ ಇಂತಹ ಭಾವನೆಗಳನ್ನು ರ್‍ಯಾಕೆಟ್ ಫೀಲಿಂಗ್ ಎಂದು ಕರೆಯುತ್ತಾನೆ. ಸಹಜವಾಗಿ ಮೂಡಬೇಕಾದ ಭಾವನೆಗಳು ಜೆನ್ಯೂನ್ ಫೀಲಿಂಗ್ಸ್ (ಅಸಲಿ ಭಾವನೆಗಳು) ಎಂದು ಹೆಸರಿಸಿದ್ದಾನೆ. ಕೆಳಗಿನ ಉದಾಹರಣೆಗಳನ್ನು ಗಮನಿಸಿ;

★ ಹೆಣ್ಣು ಮಕ್ಕಳು ತಮಗೆ ಅವಮಾನ ಅಥವಾ ಅನ್ಯಾಯವಾದಾಗ ಕೋಪದಿಂದ ಪ್ರತಿಭಟಿಸದೆ ಹೊಂದಿಕೊಂಡು ಹೋಗಲು ಹೇಳಲಾಗುತ್ತದೆ. ವ್ಯಕ್ತಪಡಿಸಲಾಗದ ಅವರ ಸಿಟ್ಟು (ಅಸಲಿ ಭಾವನೆ) ದುಃಖವಾಗಿ (ನಕಲಿ ಭಾವನೆ) ಪರಿವರ್ತನೆಗೊಳ್ಳುತ್ತದೆ.

★ ಗಂಡುಮಗು ಬಿದ್ದು ಅಳುತ್ತಿದೆ. ಪೋಷಕರು ಮಗುವನ್ನು ಸಮಾಧಾನಪಡಿಸಲು, ಈ ಬಾಗಿಲಿಗೇ ಅಲ್ವಾ ನೀನು ಎಡವಿದ್ದು, ಅದಕ್ಕೆ ಚೆನ್ನಾಗಿ ಹೊಡಿ ಎಂದು ಹೇಳುತ್ತಾರೆ. ಆಗ ಮಗು ದುಃಖ ನೋವುಗಳನ್ನು (ಅಸಲಿ ಭಾವನೆಗಳು) ಸಿಟ್ಟು ದ್ವೇಷವಾಗಿ (ನಕಲಿ ಭಾವನೆಗಳು) ಮಾರ್ಪಡಿಸುತ್ತದೆ.

ಇಂತಹ ಘಟನೆಗಳು ಬಾಲ್ಯದಲ್ಲಿ ನಡೆಯುತ್ತಲೇ ಹೋದಾಗ ಮಕ್ಕಳು ನಕಲಿ ಭಾವನೆಗಳನ್ನೇ ತಮ್ಮ ಸಹಜ ಅಭಿವ್ಯಕ್ತಿ ಎಂದುಕೊಳ್ಳುತ್ತಾರೆ. ನಕಲಿ ಭಾವನೆಗಳು ಲಿಂಗಾಧಾರಿತ ಆಗಲೇಬೇಕೆಂದಿಲ್ಲ. ಎರಿಕ್ ಬರ್ನ್ ಹೇಳುವಂತೆ ಪ್ರತಿ ಕುಟುಂಬವೂ ತನ್ನದೇ ನಕಲಿ ಭಾವನೆಗಳಲ್ಲಿ ನೈಪುಣ್ಯವನ್ನು ಪಡೆದುಕೊಂಡಿರುತ್ತದೆ.

ದೊಡ್ಡವರಾದ ಮೇಲೂ ಕೂಡ ನಕಲಿ ಭಾವನೆಗಳನ್ನು ವ್ಯಕ್ತಪಡಿಸುವುದು